**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.9/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ. ಆರ್. ಮಹಮ್ಮದ್ ಇಲಿಯಾಜ್ |
| ತಂದೆಯ/ಗಂಡನ ಹೆಸರು | : | ಎಂ. ರೋಷನ್ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ.ಎಸ್.ಐ., ಮಲೇಬೆನ್ನೂರು ಪೊಲೀಸ್ ಠಾಣೆ |
| ವಾಸ ಸ್ಥಳ | : | ಹರಿಹರ |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 11

ದಿ: 07-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

1. 2017 ರಿಂದ 2022 ರವರೆಗೆ ಹರಿಹರ ವೃತ್ತ ಕಛೇರಿಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 12-09-2020 ರಂದು ಬೆಳಿಗ್ಗೆ 10.30 ಗಂಟೆಗೆ ಹರಿಹರ ನಗರ ಸಿ.ಪಿ.ಐ. ರವರು ನನಗೆ, ಚಾಸಾ-5, 6, 9, 10, 12 ಮತ್ತು 13 ರವರನ್ನು ಕುರಿತು ಚಾಸಾ-1 ರವರು ಅನಗವಾಡಿ-ಶಿವಮೊಗ್ಗ ರಸ್ತೆ ಭರಣಿ ಹೋಟೆಲ್ ಮುಂಭಾಗದಲ್ಲಿ ಯಾರೋ 03 ಜನ ಅಕ್ರಮವಾಗಿ ಗಾಂಜಾವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿತ್ತು. ಆದ್ದರಿಂದ ಈ ಪ್ರಕರಣವನ್ನು ದಾಖಲಿಸಿದ್ದೇನೆ. ಕಛೇರಿಗೆ ಕರೆಸಿದ್ದ ಚಾಸಾ-2 ಮತ್ತು 3 ರವರನ್ನು ಪಂಚರನ್ನು ಪರಿಚಯಿಸಿ, ಪತ್ರಾಂಕಿತ ಅಧಿಕಾರಿಗಳಾದ

ಚಾಸಾ-4 ರವರನ್ನು ಪರಿಚಯಿಸಿ. ದಾಳಿ ಮಾಡಬೇಕಾಗಿರುತ್ತದೆ ಆದ್ದರಿಂದ ದಾಳಿಗೆ ಸಹಕರಿಸಬೇಕು ಅಂತ ತಿಳಿಸಿರುತ್ತಾರೆ.

2. ನಂತರ ಅದರಂತೆ ನಮ್ಮನ್ನು ಸರ್ಕಾರಿ ವಾಹನದಲ್ಲಿ ಕೆ.ಎ. 17 ಜಿ. 287 ಮತ್ತು ಕೆ.ಎ. 17 ಜಿ. 0547 ವಾಹನಗಳಲ್ಲಿ ಅನಗವಾಡಿ ಗ್ರಾಮದ ಹತ್ತಿರದಲ್ಲಿರುವ ಇಂಡಿಯನ್ ಡಾಬಾದ ಬಳಿ ಹತ್ತಿರದಲ್ಲಿ ನಿಂತುಕೊಂಡು ನೋಡಲಾಗಿ ಯಾರೋ 03 ಜನರು ಭರಣಿ ಹೋಟೆಲ್ ಮುಂಭಾಗದಲ್ಲಿ ಒಂದು ಆಟೋವನ್ನು ನಿಲ್ಲಿಸಿಕೊಂಡು ನಿಂತಿದ್ದು, ನಾವೆಲ್ಲರೂ ಪರಸ್ಪರ ಅಂಗ ಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ಹಣ ಮತ್ತು ಯಾವುದೇ ಮಾದಕ ವಸ್ತುಗಳು ಇಲ್ಲ ಅಂತ ಖಚಿತಪಡಿಸಿಕೊಂಡು, ಮರೆಯಾಗಿ ನಿಂತು ನೋಡಿದಾಗ ಅವರನ್ನು ನೋಡಿ ಸದರಿ 03 ಜನರನ್ನು ನಾವೆಲ್ಲರೂ ಸುತ್ತುವರೆದು ಹಿಡಿದುಕೊಂಡೆವು. ನಂತರ ಚಾಸಾ-01 ರವರು ಆ ಮೂವರನ್ನು ವಿಚಾರಣೆ ಮಾಡಿದರು. ಆಗ ಅವರು ತಮ್ಮ ಹೆಸರು ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ ಅಂತ ಹೇಳಿರುತ್ತಾರೆ. ನಂತರ ನಮ್ಮ ಜೊತೆ ಇದ್ದ ಚಾಸಾ-4 ರವರು ಅಂಗ ಶೋಧನೆ ಮಾಡಲು ಕೇಳಿದ್ದು, ಅವರ ಸಹಕರಿಸಿದರು. ನಂತರ 1 ನೇ ಆರೋಪಿಯ ಅಂಗ ಶೋಧನೆಯನ್ನು ಮಾಡಲಾಗಿ, ಅವರ ಬಳಿ ಸಿಕ್ಕಂತಹ ಸೊಪ್ಪು, ಹೂವುನಿಂದ ಕೂಡಿದ ಗಾಟು ವಾಸನೆ ಬರುತ್ತಿದ್ದನ್ನು ಪರಿಶೀಲಿಸಿ ಅದು ಗಾಂಜಾ ಅಂತ ಪರಿಶೀಲಿಸಿಕೊಂಡು ತನಿಖಾಧಿಕಾರಿಗಳು ಅದನ್ನು ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದ ತೂಕ ಮಾಡಲಾಗಿ, ಅದು 2 ಕೆ.ಜಿ. 45 ಗ್ರಾಂ. ತೂಕ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಲಾಯಿತು. ರಾಹುಲ್ ಮತ್ತು ಮಲ್ಲಿಕಾರ್ಜುನರವರ ಬಳಿ ಒಂದೊಂದು ಬ್ಯಾಗ್ ಇತ್ತು. 2 ನೇ ಆರೋಪಿಯ ಬಳಿ ಸೊಪ್ಪು ಮತ್ತು ಹೂವುನಿಂದ ಕೂಡಿದ ಗಾಟು ವಾಸನೆ ಬರುತ್ತಿರುವ ವಸ್ತು ಇತ್ತು, ಅದನ್ನು ಪರಿಶೀಲಿಸಿ ಅದು ಗಾಂಜಾ ಅಂತ ಖಚಿತಪಡಿಸಿಕೊಂಡು, ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದ ತೂಕ ಮಾಡಲಾಗಿ, ಅದು 2 ಕೆ.ಜಿ. 45

ಗ್ರಾಂ. ತೂಕ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಲಾಯಿತು. 3 ನೇ ಆರೋಪಿಯ ಬಲ ಭಾಗದ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ 11 ಪ್ಲಾಸ್ಟಿಕ್ ಕವರ್ ಗಳು ಇದ್ದು, ಅವುಗಳಲ್ಲಿ ಸಹ ಗಾಂಜಾ ಇದ್ದದ್ದು ಕಂಡು ಬಂತು. ಅದನ್ನು ಪರಿಶೀಲನೆ ಮಾಡಿ ಗಾಂಜಾ ಎಂದು ಖಚಿತಪಡಿಸಿಕೊಂಡು, ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದ ತೂಕ ಮಾಡಲಾಗಿ, ಅದು 80 ಗ್ರಾಂ. ತೂಕ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಲಾಯಿತು. ಸದರಿ ಆರೋಪಿಯ ಎಡಜೇಬಿನಲ್ಲಿ 23 ಖಾಲಿ ಪ್ಲಾಸ್ಟಿಕ್ ಕವರ್ ಗಳು ಇದ್ದು, ಅವುಗಳನ್ನು ಸಹ ವಶಪಡಿಸಿಕೊಂಡು ಸೀಲ್ ಮಾಡಲಾಯಿತು. ಕೃತ್ಯಕ್ಕೆ ಬಳಿಸಿ ಆಟೋ ನಂಬರ ಕೆ.ಎ. 14 ಬಿ. 8176 ನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಈ ಪಂಚನಾಮೆಯನ್ನು ಮಧ್ಯಾಹ್ನ 1.30 ರಿಂದ 3.15 ಗಂಟೆಯವರೆಗೆ ಸ್ಥಳದಲ್ಲಿ ಟೈಪ್ ಮಾಡಿಸಲಾಯಿತು. ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-2 ಅಂತ ಗುರುತಿಸಲಾಗಿದೆ. ಪಂಚನಾಮೆಯ ಕಾಲಕ್ಕೆ ತನಿಖಾಧಿಕಾರಿಗಳ ನಿರ್ದೇಶನದ ಮೇರೆಗೆ ಠಾಣೆಗೆ ಒದಗಿಸಲಾಗಿರುವ ಸೋನಿ ಕ್ಯಾಮರಾದಿಂದ ನಾನು 10 ಪೋಟೋಗಳನ್ನು ತೆಗೆದಿರುತ್ತೇನೆ. ಈ ಬಗ್ಗೆ ನಾನು IEA ರಡಿಯಲ್ಲಿ 65B ಪ್ರಮಾಣ ಪತ್ರವನ್ನು ನೀಡಿದ್ದೇನೆ. 65B ಪ್ರಮಾಣ ಪತ್ರದ true ಪ್ರತಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಅಂತ ಗುರುತಿಸಲಾಯಿತು. ವಶಪಡಿಸಿಕೊಂಡಿರುವಂತಹ ವಸ್ತುಗಳನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 7 ಅಂತ ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಚಾಸಾ-10 ರವರು ಟೈಪ್ ಮಾಡಿರುತ್ತಾರೆ. ಇಂಡಿಯನ್ ಡಾಬಾದಲ್ಲಿ ವಿದ್ಯುತ್ ಸಹಾಯದಿಂದ ಪ್ರಿಂಟ್ ತೆಗೆಯಲಾಯಿತು. ಈಗ ವಿಸಿ ಮೂಲಕ 3 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.), ವಕೀಲರಿಂದ ಆರೋಪಿತರ ಪರವಾಗಿ**:

3. ಹರಿಹರದಲ್ಲಿ ಆರೋಗ್ಯ ಮಾತೆ ಅಂತ ಚರ್ಚ ಇದೆ. ದಕ್ಷಿಣ ಭಾರತದಲ್ಲಿ ಅದು ಪವಿತ್ರವಾದ ಸ್ಥಳ ಅಂದರೆ ಇರಬಹುದು. ನನಗೆ ಗೊತ್ತಿದ್ದರೂ ಸಹ ಇರಬಹುದು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಚರ್ಚನಲ್ಲಿ ಜಾತ್ರೆ ನಡೆದಾಗ ಕ್ರೈಸ್ತ ಭಾಂದವರು ಮತ್ತು ಇತರೆ ಜನರು ಬರುತ್ತಾರೆ ಅಂದರೆ ನಿಜ. ದಾಳಿ ಮಾಡಿದ್ದೇವೆ ಅಂತ ಹೇಳಲಾದ ದಿನ ನಾವು ಸಮವಸ್ತ್ರ ಧರಿಸಿರಲಿಲ್ಲ ಕೇವಲ ಚಾಸಾ-1 ರವರು ಮಾತ್ರ ಸಮವಸ್ತ್ರ ಧರಿಸಿದ್ದರು ಅಂದರೆ ನಿಜ. ಹರಿಹರದಿಂದ ಅನಗವಾಡಿ 05-06 ಕಿ.ಮೀ. ಅಂತರ ಇದೆ ಅಂದರೆ ನಿಜ. ಭರಣಿ ಹೋಟೆಲ್ ನ ಕಾಣೆಶುಮಾರಿ ನಂಬರ ನನಗೆ ಹೇಳಲು ಆಗುವುದಿಲ್ಲ. ಅದು ಯಾವ ಸರ್ವೇ ನಂಬರನಲ್ಲಿ ಇದೆ ಅಂತ ನನಗೆ ಹೇಳಲು ಬರುವುದಿಲ್ಲ. ಸದರಿ ಹೋಟೆಲ್ ನ ಮಾಲೀಕರು ಯಾರು ಅಂತ ಹೇಳಲು ಆಗುವುದಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಆ ದಿನ ಹೋಟೆಲ್ ಬಂದ್ ಆಗಿತ್ತು. ನಾನು ಹೇಳುವ ರೀತಿಯಲ್ಲಿ ಅಲ್ಲಿ ಯಾವುದೇ ಭರಣಿ ಹೋಟೆಲ್ ಇಲ್ಲ ಅಂದರೆ ಸರಿಯಲ್ಲ. ಹರಿಹರದಿಂದ ಅನಗವಾಡಿ ಕ್ರಾಸ್ ನಡುವೆ, ಪೆಟ್ರೋಲ್ ಬಂಕ್ ಮತ್ತು ಹೋಟೆಲ್ ಗಳು ಇವೆ ಅಂದರೆ ನಿಜ. ಆ ಪೆಟ್ರೋಲ್ ಬಂಕ್ ನಲ್ಲಿ ಸಿಸಿಟಿವಿ ಇದೆ ಅಂದರೆ ನನಗೆ ಗೊತ್ತಿಲ್ಲ. ಅನಗವಾಡಿ ಕ್ರಾಸ್ ಹತ್ತಿರ ಒಂದು ಹರಾ ಮಠ ಇದೆ ಅಂದರೆ ನಿಜ. ಅದರ ಎದುರುಗಡೆ Honey Garden ಅಂತ ಹೋಟೆಲ್ ಇದೆ ಅಂದರೆ ನನಗೆ ಗೊತ್ತಿಲ್ಲ. ಅದು ಜನನಿಬೀಡ ಪ್ರದೇಶ ಅಂದರೆ ನಿಜ. ಪಂಚರು ಸ್ಥಳೀಯರು ಅಲ್ಲ ಅಂದರೆ ನನಗೆ ಗೊತ್ತಿಲ್ಲ. ಅನಗವಾಡಿ ರಸ್ತೆಗೆ ಬರುವ ಪೂರ್ವದಲ್ಲಿ ಸಾಕಷ್ಟು ಹೋಟೆಲ್ ಗಳು, ಮಠಗಳು ಇವೆ ಅಂದರೆ ನಿಜ. ಅವು ಎಲ್ಲರದರಲ್ಲೂ ಸಿಸಿಟಿವಿ ಇದೆ ಅಂದರೆ ನನಗೆ ಗೊತ್ತಿಲ್ಲ.

4. ಮು.ಮಾ.1 ರಲ್ಲಿ ಸೀಲ್ ಸಹಿ ಕಾಣುತ್ತಿಲ್ಲ ಅಂದರೆ ತನಿಖಾಧಿಕಾರಿಗಳಿಗೆ ಗೊತ್ತು. ನಾನು ಹೇಳಿದಂತಹ ಅವಧಿಯಲ್ಲಿ ಎಲ್ಲಾ Procedure ಮಾಡಲು ಸಾಧ್ಯವೇ ಇಲ್ಲ ಅಂದರೆ ಸುಳ್ಳು. ಅಲ್ಲಿ ವಿಡಿಯೋಗ್ರಾಫಿ ಮಾಡಿಲ್ಲ ಅಂದರೆ ಫೋಟೋ ತೆಗೆದಿರುತ್ತೇನೆ. ಆ ದಿನ ಅಮಾನತ್ತು ಮಾಡಿದ್ದೇವೆ ಅಂತ ಹೇಳಲಾದ ವಸ್ತುವಿನಲ್ಲಿ ಎಷ್ಟು ಸೊಪ್ಪು, ಬೇರು, ಎಲೆ, ಹೂವು, ಕಾಂಡ, ಬೀಜ ಇತ್ತು ಅಂದರೆ ಪ್ರತ್ಯೇಕವಾಗಿ ತೂಕ ಮಾಡಿಲ್ಲ ಒಟ್ಟಿಗೆ ಸೇರಿ ತೂಕ ಮಾಡಿದ್ದೇವೆ. ತೂಕದ ಮತ್ತು ಅಳತೆಯ experts ನಮ್ಮ ಜೊತೆ ಇರಲಿಲ್ಲ. ಅದೇ ರೀತಿ crime photographer ಯಾರೂ ಇರಲಿಲ್ಲ. ಆ ಸ್ಥಳದಲ್ಲಿ chain of custody form ನ್ನು ತಯಾರು ಮಾಡಿದ್ದೀರಾ ಅಂದರೆ ತನಿಖಾಧಿಕಾರಿಗಳಿಗೆ ಗೊತ್ತು. ಯಾರು ಯಾರು ಅಂಗ ಶೋಧನೆ ಮಾಡಿಲ್ಲ ಅಂತ ಬರೆದಿಲ್ಲ ಅಂದರೆ ತನಿಖಾಧಿಕಾರಿಗಳು ಬರೆಸಿರುತ್ತಾರೆ. ಪತ್ರಾಂಕಿತ ಅಧಿಕಾರಿಗಳು ಹಾಗೂ ಪಂಚರು ಆ ದಿನ ಯಾರೂ ಗುರುತಿನ ಚೀಟಿ ಧರಿಸಿಲ್ಲ ಅಂದರೆ ನನಗೆ ಮಾಹಿತಿ ಇಲ್ಲ. ಆ ದಿನ ವಿಸಿಯಲ್ಲಿ ಕಾಣುತ್ತಿರುವ ಆರೋಪಿಯಿಂದ ಯಾವುದೇ ಗಾಂಜಾ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಮತ್ತು ವಶಪಡಿಸಿಕೊಂಡಿದ್ದೇವೆ ಅಂತ ಹೇಳುವ ಗಾಂಜಾ ವಸ್ತು ಆರೋಪಿಗೆ ಸಂಬಂಧಿಸಿದ್ದು ಅಲ್ಲ ಅಂದರೆ ಸರಿಯಲ್ಲ. ಮಹಜರ ದಾಖಲೆಯನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿದ್ದು ಇರುತ್ತದೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿ ಯಾವುದೇ ಹೇಳಿಕೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಆರೋಗ್ಯ ಮಾತಾ ದೇವಸ್ಥಾನಕ್ಕೆ ಬಂದಿರುವ ಆರೋಪಿಯನ್ನು ಈ ಪ್ರಕರಣದಲ್ಲಿ ಸುಳ್ಳು ಸೇರಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. 65B ಪ್ರಮಾಣ ಪತ್ರದಲ್ಲಿ ಕ್ಯಾಮರಾ ಯಾವ ಕಂಪನಿಯದ್ದು ಅಂತ ನಮೂದು ಮಾಡಿಲ್ಲ ಅಂದರೆ ನಿಜ. ಫೋಟೋ ತೆಗೆದ ಬಗ್ಗೆ Hash value ಮಾಡಿಲ್ಲ. Chain of custody form ನಮಗೆ ಏನು ಸಂಬಂಧ ಇಲ್ಲ. ನಿಪಿ-3 ನ್ನು ಪೊಟೋ ಸ್ಟುಡಿಯೋದಲ್ಲಿ ಪ್ರಿಂಟ್ ತೆಗೆಸಲಾಯಿತು. ಅದು ಯಾವ

ಕಂಪನಿಯದ್ದು ಅಂತ ನನಗೆ ಹೇಳಲು ಆಗುವುದಿಲ್ಲ. ಅವರಿಂದ ನಾನು 65B ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ. Meta data ವನ್ನು ನಾವು ಡೌನಲೋಡ್ ಮಾಡಿಲ್ಲ. ನಾನು ಯಾವುದೇ ಫೋಟೋ ತೆಗೆದಿಲ್ಲ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.